ಹಿಂದಿ ಮೂಲ: ವಿಷ್ಣು ನಾಗರ್
ಕನ್ನಡಕ್ಕೆ: ಡಿ.ಎನ್. ಶ್ರೀನಾಥ್

ಕಲೆ: ಡಿ.ಕೆ. ರಮೇಶ್

# ಸಿಂಹ ಮತ್ತು ಮನುಷ್ಯ



ಸಿಂಹ ಯಾಕೆ ಸಿಂಹವಾಗಿರುತ್ತದೆ, ಮನುಷ್ಯ ಯಾಕೆ ಮನುಷ್ಯನಾಗಿರುತ್ತಾನೆ ಎಂಬುದು ತಿಳಿದಿದೆಯೇ?

ಹಾಗಂತ ಕಾರಣಗಳು ಅನೇಕ ಇರಬಹುದು. ಆದರೆ, ಇದಕ್ಕೆ ಈ ಒಂದು ಕಾರಣ ಇದೆ–

ಸಿಂಹ ತನ್ನ ಮುಖವನ್ನೆಂದೂ ತೊಳೆಯಲಿಲ್ಲ, ಮನುಷ್ಯ ತನ್ನ ಮುಖವನ್ನೆಂದೂ ತೊಳೆಯುವುದನ್ನು ಬಿಟ್ಟಿಲ್ಲ. ಮನುಷ್ಯ ತನ್ನ ಮುಖ ತೊಳೆಯುವುದನ್ನು ಬಿಟ್ಟರೆ, ಅವನು ಸಿಂಹವಾಗುತ್ತಿದ್ದನೇನೋ; ಸಿಂಹ ತನ್ನ ಮುಖ ತೊಳೆಯುವುದನ್ನು ಕಲಿತಿದ್ದರೆ, ಅದು ಮನುಷ್ಯ ಆಗುತ್ತಿತ್ತೇನೋ.

ಸಿಂಹವೂ ಇದುವರೆಗೆ ಬದಲಾಗಲು ಸಾಧ್ಯವಾಗಲಿಲ್ಲ, ಮನುಷ್ಯನೂ ಬದಲಾಗಲು ಸಾಧ್ಯವಾಗಲಿಲ್ಲ. ಹೀಗಾಗಿ ಸಿಂಹ ಮನುಷ್ಯನಾಗಲು ಸಾಧ್ಯವಾಗಲಿಲ್ಲ, ಮನುಷ್ಯ ಸಿಂಹವಾಗಲು ಯಶಸ್ವಿಯಾಗಲಿಲ್ಲ. ಆದರೆ, ಸಿಂಹ ಮತ್ತು ಮನುಷ್ಯ ಈ ವಿಷಯದಲ್ಲಿ ದುಃಖಿಯಾಗಿದ್ದಾರೆ. ಇಬ್ಬರಿಗೂ ತಮ್ಮತಮ್ಮ ಅಸಹಾಯಕತೆ ಮತ್ತು ವಿವಶತೆಯ ಅರಿವಿದೆ. ಇಬ್ಬರಿಗೂ ತಮ್ಮತಮ್ಮ ಶಕ್ತಿಯ ಬಗ್ಗೆಯೂ ಮನವರಿಕೆಯಾಗಿದೆ. ಅದಕ್ಕೇ ಇಬ್ಬರು ಅಡಗಿಯೇ ಇದ್ದು ಪರಸ್ಪರ ಪ್ರಹಾರವೆಸಗುತ್ತಾರೆ. ಸಿಂಹವನ್ನು ನೋಡಿ ಮನುಷ್ಯನೇ ಹೆಚ್ಚು ಹೆದರುತ್ತಾನೆ ಎಂಬುದು ಪ್ರತ್ಯೇಕ ವಿಷಯ. ಆದರೂ ವಾಸ್ತವಿಕತೆಯೇನೆಂದರೆ, ಸಿಂಹ ಇದುವರೆಗೆ ಎಷ್ಟು ಜನರನ್ನು ಕೊಂದಿರಬಹುದೋ, ಅದಕ್ಕೂ ಅನೇಕ ಪಟ್ಟು ಹೆಚ್ಚು ಸಿಂಹಗಳನ್ನು ಮನುಷ್ಯ ಕೊಂದಿದ್ದಾನೆ; ಆದಾಗ್ಯೂ ಭವಿಷ್ಯದಲ್ಲಿ ಈ ಭೂಮಿಯಲ್ಲಿ ಮನುಷ್ಯ ಕಾಣಬರುತ್ತಾನೆ, ಆದರೆ ಸಿಂಹ ಕಾಣಬರುವುದಿಲ್ಲ.



# ಆಗಾಗ

ಮನುಷ್ಯ ಆಗಾಗ ಸಿಂಹವಾಗುತ್ತಿರುತ್ತಾನೆ. ಸಿಂಹವೂ ಆಗಾಗ ಮನುಷ್ಯನಾಗುತ್ತಿರುತ್ತದೆ. ಆಗಾಗ ಸಿಂಹವಾದರೆ ಮನುಷ್ಯನ ಕೆಲಸಗಳು ನೆರವೇರುತ್ತವೆ; ಒಮ್ಮೊಮ್ಮೆ ಅವನ ಕೆಲಸಗಳೂ ಹಾಳಾಗುತ್ತವೆ. ಸಿಂಹ ಮನುಷ್ಯನಾದರೂ ಸಹ ಎಷ್ಟೋ ಬಾರಿ ಹೀಗೆಯೇ ಆಗುತ್ತದೆ. ಅದು ಎಲ್ಲಿಯವರೆಗೆ ಎಂದರೆ, ಬೇಟೆ ಎದುರಿಗಿದ್ದಾಗ್ಯೂ ಅದು ಹಸಿವೆಯಿಂದ ಸಾಯುವ ಸಮಯ ಬರುತ್ತದೆ.